ವಿಭಾಗದಲ್ಲಿ ಬಹುಮುಖ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದ ಹ.ಕ. ರಾಜೇಗೌಡರು, ಪ್ರಸಿದ್ಧ ಗ್ರಂಥ ಸಂಪಾದಕರಾದ ಜಿ.ಜಿ. ಮಂಜುನಾಥನ್ ಅವರು ಇದ್ದರು. ಇವರೆಲ್ಲರ ಪ್ರೋತ್ಸಾಹದಿಂದ ಗ್ರಂಥ ಸಂಪಾದನೆಯಿಂದ ಆಚೆಗೆ ಬೇರೆ ಬೇರೆ ಲೇಖನಗಳನ್ನು ಬರೆಯಲು ಸಾಧ್ಯವಾಯಿತು. ವಿಚಾರ ಸಂಕಿರಣಗಳಲ್ಲಿಯೂ ಪ್ರಬಂಧಗಳನ್ನು ಮಂಡಿಸುತ್ತಿದ್ದೆ. ವಿಶ್ವವಿದ್ಯಾಲಯಕ್ಕೆ ಯಾರೇ ಬಂದರೂ ಬಸವಾರಾಧ್ಯರು ನನ್ನನ್ನು ಪರಿಚಯಿಸುತ್ತಿದ್ದರು. ನಾನು 1975ರಲ್ಲಿ ಕೆಲಸಕ್ಕೆ ಸೇರಿದ್ದೆ. 1976ರಲ್ಲಿ ನನ್ನ ಮೊದಲ ಗ್ರಂಥ 'ಪುರಾತನರ ಚರಿತೆ'ಯನ್ನು ಪ್ರಕಟಿಸಿದೆ. ಆ ಸಂದರ್ಭದಲ್ಲಿ ಒಂದು ದಿನ ಹಿರಿಯ ಸಂಶೋಧಕರಾದ ಎಂ.ಎಂ. ಕಲಬುರ್ಗಿಯವರು ಮೈಸೂರು ವಿಶ್ವವಿದ್ಯಾಲಯಕ್ಕೆ ಬಂದರು. ಬಸವಾರಾಧ್ಯ ಅವರು ಮತ್ತು ನಾನು ಗ್ರಂಥ ಒಂದರ ಕರಡು ತಿದ್ದುತ್ತಿದ್ದೆವು. ಕಲಬುರ್ಗಿಯವರನ್ನು ಆ ತನಕ ನಾನು ನೋಡಿರಲಿಲ್ಲ. ಪರಿಚಯವೂ ಇರಲಿಲ್ಲ. ಬಸವಾರಾಧ್ಯರು, 'ಇವರು ಯಾರೆಂದುಕೊಂಡಿರಿ? ಕಲಬುರ್ಗಿಯವರು' ಎಂದು ಪರಿಚಯಿಸಿದರು. ಅವರ ಕುರಿತು ಸಾಕಷ್ಟು ಕೇಳಿದ್ದೆ. ಅವರ ಗ್ರಂಥಗಳನ್ನು ಓದಿದ್ದೆ. ಬಹಳ ಸಂತೋಷವಾಯಿತು. ನನ್ನ ಹೆಸರು ಕೇಳಿ 'ಭಾನುಮತಿಯೆ? ಸಂತೋಷವಾಯಿತು. ನಿಮ್ಮ ಪುಸ್ತಕಕ್ಕೆ ಧಾರವಾಡದ ವಿದ್ಯಾವರ್ಧಕ ಸಂಘದ ಪ್ರಶಸ್ತಿ ಬಂದಿದೆ' ಅಂದರು. ಆಗವರು ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದರು. ಮುಂದೆ ಗ್ರಂಥ ಸಂಪಾದನೆಯಲ್ಲಿ ಅವರು ನನಗೆ ವಿಪುಲವಾದ ಅವಕಾಶಗಳನ್ನು ಕೊಟ್ಟರು. ಚಾರಿತ್ರಿಕ ಗ್ರಂಥ ಪ್ರಕಟಣೆಗೆ ಮುಖ್ಯ ಸ್ಫೂರ್ತಿಯಾದರು. ಇವರೆಲ್ಲರನ್ನು ಯಾವತ್ತೂ ಸ್ಮರಿಸಿಕೊಳ್ಳುವೆ. ಅಂತಹ ದಿನಗಳಲ್ಲೇ ಇತಿಹಾಸ ವಿಭಾಗದಲ್ಲಿದ್ದ ನಿವೃತ್ತ ಪ್ರೊಫೆಸರ್ ಒಬ್ಬರು ನಮ್ಮಲ್ಲಿರುವ ಒಂದು ಅಪ್ರಕಟಿತ ಕಾವ್ಯದ ಕುರಿತು ಪ್ರಸ್ತಾಪಿಸಿದರು. ಇದನ್ನು ಇತಿಹಾಸ ತಜ್ಞ ಹಯವದನರಾವ್ ಉಲ್ಲೇಖಿಸಿದ್ದಾರೆ ಮತ್ತು ನೀವು ಸಂಪಾದಿಸಿ ಪ್ರಕಟಿಸಿ ಎಂದು ಬಸವಾರಾಧ್ಯರಿಗೆ ಹೇಳಿದರು. ಬಸವಾರಾಧ್ಯರು, 'ನಾನೀಗ ನಿವೃತ್ತಿಯ ಹತ್ತಿರವಿದ್ದೇನೆ; ನನಗಿನ್ನು ಅದೆಲ್ಲ ಆಗುವುದಿಲ್ಲ. ಭಾನುಮತಿ ಮಾಡಬಹುದು' ಎಂದರು. ನನಗೂ ಕುತೂಹಲ ಮೂಡಿತು; ಆ ಹಸ್ತಪ್ರತಿಯನ್ನು ನೋಡಿದೆ. ಇದು ಕನ್ನಡದ ಅಪರೂಪದ ಸಂಗರ ಕಾವ್ಯವಾಗಿತ್ತು. ಮುಂದೆ ಇದನ್ನು 'ಸೌಂದರಕಾವ್ಯ'ವೆಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದೆ. ಕಲಬುರ್ಗಿಯವರ ನೇತೃತ್ವದಲ್ಲಿ ವಚನ ಪರಿಷ್ಕರಣ ಬೃಹತ್ ಯೋಜನೆಗಳಲ್ಲಿ ಕೆಲಸ ಮಾಡಿದ್ದು ತೃಪ್ತಿ ನೀಡಿದೆ. ಬಸವಯುಗದ ವಚನ ಮಹಾ ಸಂಪುಟದ ಸಂಕೀರ್ಣ ವಚನ ಸಂಪುಟ ಮೂರು, ನಾಲ್ಕು, ಆರರಲ್ಲಿ ಕೆಲಸ ಮಾಡಿದ್ದೇನೆ. ಇದಲ್ಲದೆ ಅಂತರರಾಷ್ಟ್ರೀಯ ಸಹಕಾರದಿಂದ ಮೂಡಿ ಬಂದ ಕರ್ಣಾಟಕ ಭಾಗವತ ಪರಿಷ್ಕರಣದಲ್ಲಿ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳ ಸಂಪಾದನಾ ಮಂಡಳಿಯಲ್ಲಿ ಕೆಲಸ ಮಾಡಿದೆ. ಇದೆಲ್ಲ ಸಾಧ್ಯವಾದದ್ದು, ಪ್ರೊ. ಚಂದ್ರಶೇಖರ್ ಮತ್ತು ಹರಿಹರೇಶ್ವರ ಅವರಿಂದ. ಇವುಗಳಲ್ಲದೆ ಗ್ರಂಥ ಸಂಪಾದನೆಯ ಅಧ್ಯಯನಗಳನ್ನು ಕುರಿತು ಗ್ರಂಥ ರಚನೆ ಮಾಡಲು ಪುರುಷ ವಿದ್ವಾಂಸರೇ ಸ್ಫೂರ್ತಿ.

**◆ ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇಲ್ಲ ಅಂತ ಕೇಳಿರುವೆ. ನಿಮಗಿಂತ ಮುಂಚಿನ, ನಿಮ್ಮ ನಂತರದ ಗ್ರಂಥ ಸಂಪಾದಕಿಯರ ಕುರಿತು ಹೇಳಬಹುದೆ?**

ತುಂಬ ಮುಖ್ಯವಾದ ಪ್ರಶ್ನೆಯಿದು. ಈ ಕುರಿತು ನಾನು 1982ರಲ್ಲಿ ಮಹಿಳೆಯರ ಗ್ರಂಥ ಸಂಪಾದನೆ ಅಂತ ಒಂದು ಲೇಖನ ಬರೆದಿದ್ದೆ. ಇದು ಈ ನಿಟ್ಟಿನಲ್ಲಿ ಬಂದಂಥ ಮೊದಲ ಬರಹವೆನ್ನಬಹುದು. ನಮ್ಮದು ಬಹುತೇಕ ಪುರುಷರ ಕ್ಷೇತ್ರ. ಮಿಷನರಿಗಳಿಂದ ಆರಂಭವಾದ ಈ ಕಾರ್ಯದಲ್ಲಿ ಇಲ್ಲಿಯವರೆಗೆ ದೊಡ್ಡ ಕೊಡುಗೆಯನ್ನು ಕೊಟ್ಟವರು ಪುರುಷರೇ. ಮಹಿಳಾ ಗ್ರಂಥ ಸಂಪಾದನೆಯಲ್ಲಿ ಬಂದ ಪ್ರಥಮ ಕಾವ್ಯ 'ಹದಿಬದೆಯ ಧರ್ಮ'. 1940ರಲ್ಲಿ ಚಂಪಾಬಾಯಿ